

ಮಜ್ಜಿ ಗಣೇಶ



ಹರೀಶ ಮುಟಗಾರ

ಕರ್ನಾಟಕ ತಂಡದಲ್ಲಿ ಮನ್ನಣೆ ಸಿಗಲಿಲ್ಲ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ವ್ಯಾಪಕವಾಗಿರುವ ಪ್ರತಿಭಾನ್ವಿತ ಹಾಕಿ ಆಟಗಾರರು 'ರಾಜಧಾನಿ ಬೆಂಗಳೂರು' ತಲುಪುವ ಹೊತ್ತಿಗೆ ಅವರಿಗೆ ಅವಕಾಶಗಳು ಇಳಿಮುಖವಾಗುತ್ತಿದ್ದವು.

ಆದರೆ, ಈ ಸಲ ಚಿನ್ನದ ಪದಕ ಗೆದ್ದ ಕರ್ನಾಟಕ ತಂಡದಲ್ಲಿ ಕೊಡಗು ಜಿಲ್ಲೆಯ ಶರತ್ ಸೋಮಣ್ಣ, ದೀಕ್ಷಿತ್ ಎ.ಎಚ್., ಕೆ.ಪಿ. ಸೋಮಯ್ಯ, ಪೃಥ್ವಿರಾಜ್, ಸೂರ್ಯ ಎನ್.ಎಂ., ಎಸ್.ವಿ. ಸುನಿಲ್, ನಿಕ್ಕಿನ್ ತಿಮ್ಮಯ್ಯ, ನಾಚಪ್ಪ ಐ.ಆರ್. ಇದ್ದರು. ಇವರ ಜೊತೆಗೆ ಕೋಲಾರದ ಜಗದೀಪ ದಯಾಳ್, ಹಾಸನದ ಶೇಷಗೌಡ, ಪ್ರಣಮ್ ಗೌಡ, ಪುನೀತ್ ಆರ್., ಶಿವಮೊಗ್ಗದ ಭರತ್ ಕೆ.ಆರ್., ಮೂಲತಃ ಆಂಧ್ರದವರಾದರೂ ಬೆಂಗಳೂರಿನಲ್ಲಿ ನೆಲೆಸಿರುವ ನಾಗಸ್ರೀನು, ಬಳ್ಳಾರಿಯ ಮಜ್ಜಿ ಗಣೇಶ, ಗದಗದ ಹರೀಶ ಮುಟಗಾರ, ಬೆಂಗಳೂರಿನ ಮಹಮ್ಮದ್ ರಾಹೀಲ್ ಹಾಗೂ ಆಭರಣ ಸುದೇವ್ ಕೂಡ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ತಮ್ಮ ಸಹೋದರರು ಗದುಗಿನ ಸೆಟ್ಲಮೆಂಟ್‌ನಲ್ಲಿ ಹಾಕಿ ಆಡುವುದನ್ನು ನೋಡಿ ಆಟದ ಅಭ್ಯಾಸ ರೂಢಿಸಿಕೊಂಡ ಹರೀಶ ಮುಟಗಾರ ರಾಜ್ಯಮಟ್ಟದ ಹಲವು ಟೂರ್ನಿಗಳಲ್ಲಿ ಆಡಿದ್ದಾರೆ. ಹುಬ್ಬಳ್ಳಿಯ ಅಭಿಷೇಕ ಬಿಜವಾಡ, ಸೂರಜ್ ಬಿಜವಾಡ ಮತ್ತು ಪ್ರಜ್ವಲ್ ಬಿಜವಾಡ ಸಹೋದರರು ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಟೂರ್ನಿಗಳಲ್ಲಿ ಆಡಿದ್ದಾರೆ. ಇವರಂಥ ಅನೇಕ ಆಟಗಾರರು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಇದ್ದಾರೆ.

'ಇತ್ತೀಚೆಗಿನ ವರ್ಷಗಳಲ್ಲಿ ಉತ್ತರ ಕರ್ನಾಟಕದ ಆಟಗಾರರಿಗೂ ರಾಜ್ಯ ಹಾಗೂ ರಾಷ್ಟ್ರೀಯ ತಂಡದಲ್ಲಿ ಹೆಚ್ಚು ಅವಕಾಶಗಳು ಸಿಗುತ್ತಿವೆ. ಇದರಿಂದ ನಮ್ಮ ಭಾಗದ ಅನೇಕ ಆಟಗಾರರಿಗೆ ಉತ್ತೇಜನ ಸಿಗುತ್ತಿದೆ. ಎಲ್ಲಾ ಜಿಲ್ಲೆಗಳಲ್ಲಿಯೂ ಹಾಕಿ ಆಡುವ ಪ್ರತಿಭಾನ್ವಿತ ಆಟಗಾರರು ಇದ್ದಾರೆ. ಅವರನ್ನು ಹುಡುಕುವ ಹಾಗೂ ಅವಕಾಶ ಕೊಡುವ ಕೆಲಸವಾಗಬೇಕಿದೆ' ಎಂದು ಹರೀಶ ಮುಟಗಾರ ಹೇಳುತ್ತಾರೆ.

'ನ್ಯಾಷನಲ್ ಗೇಮ್ಸ್'ನಲ್ಲಿ ಮೊದಲ ಬಾರಿಗೆ ಆಡಿರುವ ಬಳ್ಳಾರಿಯ ಮಜ್ಜಿ ಗಣೇಶ ಸಿಕ್ಕ ಸೀಮಿತ ಸೌಲಭ್ಯಗಳ ನಡುವೆ ವೃತ್ತಿಪರ ಹಾಕಿ ಆಟಗಾರರಾಗಿ ರಾಜ್ಯ ತಂಡದಲ್ಲಿ ಸ್ಥಾನ ಗಳಿಸಿದವರು. ಇವರ ತಂದೆ ಬಳ್ಳಾರಿಯಲ್ಲಿ ಲಾರಿ ಚಾಲಕ. ತಾಯಿಯದ್ದು ಎಮ್ಮೆಗಳನ್ನು ಮೇಯಿಸುವ ಕಾಯಕ. ಮೂಲತಃ ಆಂಧ್ರದ ಗುಂಟೂರಿನವರಾದರೂ ಬಳ್ಳಾರಿಯಲ್ಲಿಯೇ ಕಾಯಂ ವಾಸ.

'ರಾಜ್ಯ ತಂಡದಲ್ಲಿ ಆಡಲು ಅವಕಾಶ ಸಿಕ್ಕರೆ ಅದೇ ಬದುಕಿನ ಅನನ್ಯ ಸಾಧನೆ ಎಂದು ಕನಸು ಕಟ್ಟಿಕೊಂಡಿದ್ದ ನನಗೆ 'ನ್ಯಾಷನಲ್ ಗೇಮ್ಸ್'ನಲ್ಲಿ ಚೊಚ್ಚಲ ಚಿನ್ನದ ಪದಕ ಗೆದ್ದ ತಂಡದ ಆಟಗಾರ ಎನ್ನುವ ಹಿರಿಮೆಗೆ ಪಾತ್ರನಾದೆ. ತಂಡದ ಹಿರಿಯ ಆಟಗಾರರ ಮಾರ್ಗದರ್ಶನದಿಂದ ಸಮಯ ನಿರ್ವಹಣೆ, ಯಾವ ಹಂತದಲ್ಲಿ ಹೇಗೆ ಆಡಬೇಕು ಎನ್ನುವುದನ್ನು ಕಲಿತುಕೊಂಡೆ. ಅನೇಕ ಕೌಶಲಗಳನ್ನು ಹೇಳಿಕೊಟ್ಟ ಅಂತರರಾಷ್ಟ್ರೀಯ ಆಟಗಾರರ ಜೊತೆ ತಂಡದಲ್ಲಿ ಕಳೆದ ದಿನಗಳನ್ನು ಎಂದಿಗೂ ಮರೆಯಲಾರೆ' ಎಂದು ಹೇಳುವಷ್ಟರಲ್ಲಿ ಗಣೇಶ ಅವರ ಧ್ವನಿ ಭಾರವಾಗಿತ್ತು. ಭಾವುಕತೆ ಆವರಿಸಿಕೊಂಡಿತ್ತು. ಇವು ಒಂದೆರಡು ಉದಾಹರಣೆಗಳಷ್ಟೇ. ಗ್ರಾಮೀಣ ಪ್ರದೇಶದಿಂದ ಬಂದ ಬಹುತೇಕ ಕ್ರೀಡಾಪಟುಗಳ ಕಥೆ ಇದಕ್ಕಿಂತ ಭಿನ್ನವಾಗಿಲ್ಲ.

ಆದ್ದರಿಂದ ಕರ್ನಾಟಕ ತಂಡ 'ನ್ಯಾಷನಲ್ ಗೇಮ್ಸ್'ನಲ್ಲಿ ಜಯಿಸಿದ ಮೊದಲ ಚಿನ್ನ ಕೇವಲ ಪದಕವಲ್ಲ. ಗಣೇಶ ಹಾಗೂ ಹರೀಶ ಮುಟಗಾರ ಅವರಂಥ ಗ್ರಾಮೀಣ ಪ್ರತಿಭೆಗಳ ಬದುಕಿನ 'ಚಿನ್ನದ ಕನಸುಗಳು' ನನಸಾದ ಸಂಭ್ರಮದ ಕಥನ. ಇಂಥ ಯಶಸ್ವಿ ಕಥನಗಳ ಸಂಖ್ಯೆ ಸೂರ್ಮಡಿಯಾಗಲಿ. ರಾಜ್ಯ ಹಾಕಿ ತಂಡದಲ್ಲಿ ಆರಂಭವಾಗಿರುವ ನವಮನ್ವಂತರ ರಾಜ್ಯವ್ಯಾಪಿ ವಿಸ್ತರಿಸಲಿ. ಆಗ ಕರ್ನಾಟಕದ ಹಾಕಿ ಯುಗದಲ್ಲಿ ಹೊಸ ಅಧ್ಯಾಯ ದಾಖಲಾಗಲಿದೆ.

ಪ್ರತಿಕ್ರಿಯಿಸಿ: feedback@sudha.co.in

## ಎಸ್.ವಿ. ಸುನೀಲ್ ಸಂದರ್ಶನ

ಹೋಯಿತು. ಆಟದಲ್ಲಿ ಅವರು ತಮ್ಮನ್ನು ತಾವೇ ತೊಡಗಿಕೊಳ್ಳುತ್ತಿದ್ದ ರೀತಿಯೂ ಮುಖ್ಯವಾಗಿತ್ತು. ಈ ಎಲ್ಲಾ ಅಂಶಗಳು ತಂಡವನ್ನು ಸದೃಢಗೊಳಿಸಿದವು. ತಂಡವಾಗಿ ಆಡಿದ್ದರಿಂದ ಚಿನ್ನದ ಪದಕ ಗೆದ್ದುಕೊಂಡೆವು.

**◆ ರಾಜ್ಯದಲ್ಲಿ ಹಾಕಿ ಬೆಳವಣಿಗೆ ಒಂದು ಭಾಗಕ್ಕೆ ಮಾತ್ರ ಸೀಮಿತವಾಗಿದೆಯೇ?**

ಖಂಡಿತವಾಗಿಯೂ ಇಲ್ಲ. ಮೊದಲು ದಕ್ಷಿಣ ಕರ್ನಾಟಕ ಭಾಗದಿಂದ ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಆಟಗಾರರು ಬರುತ್ತಿದ್ದರು. ಈಗ ಉತ್ತರ ಕರ್ನಾಟಕದ ಆಟಗಾರರು ಕೂಡ ಸವಾಲೊಡ್ಡುವ ರೀತಿಯಲ್ಲಿ ಬರುತ್ತಿರುವುದು ಒಳ್ಳೆಯ ಬೆಳವಣಿಗೆ. ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಹಾಸ್ಟೆಲ್‌ಗಳು, ಭಾರತ ಕ್ರೀಡಾ ಪ್ರಾಧಿಕಾರದಲ್ಲಿ ಕಲಿಯುತ್ತಿರುವ ಹಾಕಿ ಆಟಗಾರರು ರಾಜ್ಯ ತಂಡದಲ್ಲಿ ಸ್ಥಾನ ಗಳಿಸುತ್ತಿದ್ದಾರೆ.

ರಾಜ್ಯದ ಬಹುತೇಕ ಎಲ್ಲಾ ಜಿಲ್ಲೆಗಳಿಂದಲೂ ಆಟಗಾರರು ರಾಜ್ಯ ತಂಡಕ್ಕೆ ಬರುತ್ತಿರುವುದನ್ನು ನೋಡಿದರೆ ಎಲ್ಲಾ ಕಡೆಯೂ ಪ್ರತಿಭಾನ್ವಿತರು ಇದ್ದಾರೆ ಎನ್ನುವುದು ಗೊತ್ತಾಗುತ್ತದೆ. ಇದಕ್ಕಾಗಿ ನಾವು 'ಹಾಕಿ ಕರ್ನಾಟಕ' ಸಂಸ್ಥೆಗೆ ಧನ್ಯವಾದ ಹೇಳಲೇಬೇಕು.

**◆ ಗ್ರಾಮೀಣ ಭಾಗದಿಂದ ಬರುವ ಮಕ್ಕಳಿಗೆ ಎದುರಾಗುವ ಪ್ರಮುಖ ಸವಾಲುಗಳೇನು?**

ಯಾವುದೇ ಕ್ರೀಡೆಯಾದರೂ ಫಿಟ್‌ನೆಸ್ ಕಾಪಾಡಿಕೊಳ್ಳುವುದಕ್ಕೆ ಮೊದಲ ಆದ್ಯತೆ ಕೊಡಬೇಕು. ಸ್ಥಳೀಯ ಹವಾಗುಣ ಹಾಗೂ ಯುವ ಆಟಗಾರರ ಬೆಳವಣಿಗೆಗೆ ಪೂರಕವಾಗಿ ಅಲ್ಲಿನ ತರಬೇತುದಾರರು ಮಾರ್ಗದರ್ಶನ ಮಾಡಬೇಕು. ಮಕ್ಕಳು ಅದನ್ನು ಮುಂದುವರಿಸಿಕೊಂಡು ಹೋಗಬೇಕು.

ನಾನು ಬಾಲ್ಯದಲ್ಲಿದ್ದಾಗ ಹಿರಿಯ ಆಟಗಾರರನ್ನು ನೋಡಿ ಕಲಿತುಕೊಂಡಿದ್ದೇನೆ. ಮಕ್ಕಳಿಗೆ ಆಡಿ ಎಂದಷ್ಟೇ ಹೇಳಿದರೆ ಹಿರಿಯರ ಜವಾಬ್ದಾರಿ ಮುಗಿಯುವುದಿಲ್ಲ. ಮಕ್ಕಳಿಗೆ ಈ ಕುರಿತು ಶಿಕ್ಷಣ ನೀಡಬೇಕು.

**◆ ರಾಜ್ಯದ ಬಹಳಷ್ಟು ಕಡೆ ಟರ್ಫ್ ಮೈದಾನವಿಲ್ಲ. ಮಣ್ಣಿನ ಅಂಕಣದಲ್ಲಿ ಅಭ್ಯಾಸ ಮಾಡಿ ಟರ್ಫ್ ಮೇಲೆ ಸ್ಪರ್ಧೆ ಎದುರಿಸುವುದು ಸವಾಲಲ್ಲವೇ?**

ಮಣ್ಣಿನಲ್ಲಿ ಅಭ್ಯಾಸ ಮಾಡಿ ಟರ್ಫ್‌ನಲ್ಲಿ ಆಡುವುದು ದೊಡ್ಡ ಕೆಲಸ. ದೊಡ್ಡ ಸವಾಲು ಕೂಡ ಹೌದು. 'ಹಾಕಿ ಕರ್ನಾಟಕ' ಹಾಗೂ ಸರ್ಕಾರ ಟರ್ಫ್ ಸೌಲಭ್ಯಗಳನ್ನು ಕಲ್ಪಿಸುತ್ತಿದೆ. ಹಲವು ಜಿಲ್ಲೆಗಳಲ್ಲಿ ಈಗಾಗಲೇ ಟರ್ಫ್ ಅಳವಡಿಸಲಾಗಿದೆ. ಇದು ವೇಗ ಪಡೆಯಬೇಕು. ಸೌಲಭ್ಯಗಳಷ್ಟೇ ಇದ್ದರೆ ಸಾಲದು; ಟರ್ಫ್ ಇದ್ದ ಕಡೆ ಸ್ಥಳೀಯ ಹಾಕಿ ಆಟಗಾರರು ಅದನ್ನು ಬಳಸಿಕೊಂಡು ಚೆನ್ನಾಗಿ ಅಭ್ಯಾಸ ಮಾಡಬೇಕು. ಪ್ರತಿ ಜಿಲ್ಲೆಗೆ ಕನಿಷ್ಠ ಮೂರು ಟರ್ಫ್‌ಗಳಾದರೂ ಇರಬೇಕು. ■

